ಚಂದ್ರಾ ಬರುವ ಮುನ್ನವೇ ಅವಳ ಕುರಿತಾದ ನಾನಾ ಕತೆಗಳು ಗಾಳಿಯಲ್ಲಿ ತೇಲಿಕೊಂಡು ಪಕ್ಕದೂರಿಂದ ನಮ್ಮೂರಿಗೆ ಬಂದು ಸೇರಿದ್ದವು. ಅಷ್ಟು ಅಂತೆ ಕಂತೆಗಳನಡುವೆ ನಮ್ಮೂರ ಅರೆ ಗಂಡಸರು ಮತ್ತೆ ಆಸೆ ಚಿಗುರಿಸಿಕೊಂಡು ಅವಳಿಗಾಗಿ ಕಾಯತೊಡಗಿದರು. ನನಗೆ ಮತ್ತೆ ಅವಳನ್ನು ನೋಡುವ ಕುತೂಹಲವಂತೂ ಇದ್ದೇಇತ್ತು. ಚಂದ್ರಾ ಈಗ ಮತ್ತಷ್ಟು ಪ್ರೌಢ ಕಳೆ ತುಂಬಿಕೊಂಡು ಚೆಲುವಾಗಿ ಕಾಣುತ್ತಿದ್ದಳು. ಹೊಟ್ಟೆ ಉಬ್ಬಿಕೊಂಡು ಕೆನ್ನೆ ತುಂಬಿಕೊಂಡು ಚಂದ್ರಾ ಹುಣ್ಣಿಮೆ ಚಂದ್ರನನ್ನು ನೆನಪಿಸುವಂತೆ ಇದ್ದಳು. ಎಲ್ಲರ ಕಣ್ಣಿಗೂ ಹಬ್ಬವಾದವಳನ್ನು ಹೆಂಗಸರು ಮನಸಾ ದ್ವೇಷಿಸುತ್ತ ತಮ್ಮ ತಮ್ಮ ಮನೆ ಗಂಡಸರನ್ನು ಭದ್ರ ಪಡಿಸುವಲ್ಲಿ ತಲ್ಲೀನರಾಗಿದ್ದರು. ಇನ್ನು ಗಂಡಸರ ಪೈಕಿ ಚಂದ್ರಾ ನಮಗೂ ಸಿಕ್ಕಾಳೆಂಬ ಭರವಸೆ ಹೊತ್ತು ಹೋದ ಒಂದಿಬ್ಬರು ಮುಖಕ್ಕೆ ಉಗಿಸಿಕೊಂಡು ಮರಳಿದ ಮೇಲೆ ಅವಳ ಕುರಿತಾದ ಗುಸಪಿಸ ಗುಟ್ಟುಗಳು ಹರಿಯುವುದು ಹೆಚ್ಚಾಯ್ತು. ಅವಳು ಸಿಕ್ಕದ ಸೇಡಿಗೋ, ಇಲ್ಲ ಸಿಕ್ಕಿದ್ದೇ ನಿಜವೋ ಅಂತೂ ಊರಿನ ಮಾಣಿ ಹೊಳೆ, ಬಿದಿರು ಕಾಡು, ಹುಲ್ಲು ಬಾಣೆ ಎಲ್ಲ ಕಡೆಯೂ ಯಾರಾದರೂ ಅದಾರದೋ ಜೊತೆ ಚಂದ್ರಾಳನ್ನು ಕಂಡವರೇ ಆಗಿದ್ದರು. 'ಅಂತೂ ನೋಡು ವಾರೀ, ನಮ್ಮ ಕಣ್ಮುಂದೆ ಬೆಳೆದ ಹುಡುಗಿ. ಇವತ್ತು ಅವಳಿಗೆ ಊರ ತುಂಬಾ ಕೆಟ್ಟ ಹೆಸರು. ಅವಳ ಜೊತೆ ನೀನ್ಯಾಕೆ ಹಚ್ಚಿಕೊಳ್ತೀಯ? ಎಲ್ಲಾದ್ರೂ ಕೆಲಸ ಹುಡ್ಕೋತ್ತಾಳೆ ಅದ್ಕೆ ನಮ್ಮನೇನೇ ಆಗಬೇಕಾ?' ಹಾಗಂತ ಸ್ವತಃ ನಾನೇ ವಾರಿಜಳಲ್ಲಿ ಕೇಳಿದ್ದೆ. ವಾರಿಜ ನಿಜಕ್ಕೂ ತುಸು ಗಟ್ಟಿಯಾಗಿ ಮಾತಾಡಿದ್ದು ಅವತ್ತೇ. 'ಅದೇನಂತೆ, ಊರ ಕಣ್ಣಿಗೆ ಚಂದ್ರಾ ಒಬ್ಬಳೇಯಂತ ಕಂಡದ್ದು? ನೋಡಿದವರ್ಯಾರಿಗೂ ಅವಳ ಜೊತೆಗಿದ್ದವರು ಯಾರು ಅಂತ ಗೊತ್ತಾಗಿಲ್ಲ ಅಲ್ವಾ?' ಎಂದು ಚಂದ್ರಾ ಪರ ವಾದಿಸಿದ್ದಳು.

ಹಾಗೆ ನೋಡಿದರೆ ಚಂದ್ರಾಳನ್ನು ನಮ್ಮನೆ ಕೆಲಸಕ್ಕೆ ಕರೆತಂದ ಮೊದಲಿಗೆ ಅಮ್ಮನೂ ಇರಿಸುಮುರಿಸು ಮಾಡಿದ್ದಳು. ಆದರೆ, ಹಳೆಯ ದಿನಗಳ ನೆನಪು ಅವಳಿಗಿನ್ನೂ ಇತ್ತಾಗಿ ತುಸು ಕಷ್ಟದಿಂದಲೇ ಅವಳು ಚಂದ್ರಾಳನ್ನು ಸೇರಿಸಿಕೊಳ್ಳಲು ಒಪ್ಪಿಗೆ ಕೊಟ್ಟಿದ್ದಳು. ಚಂದ್ರಾ ಮೊದಲಿಂದಲೂ ಹಾಗೆ. ಅವಳ ಕೆಲಸದಲ್ಲಿ ಅಪಾರ ಅಚ್ಚುಕಟ್ಟು, ಒಪ್ಪ ಓರಣ. ಸಾಲದಕ್ಕೆ ವಾರಿಜ ಕೆಲಸಕ್ಕೆ ಹೋಗತೊಡಗಿದ ಮೇಲೆ ಅಮ್ಮನಿಗೆ ತಾನೊಬ್ಬಳೇ ಮನೆಕೆಲಸ ಮಾಡುವುದು ಕಷ್ಟವಾಗಿ ಅವಳು ಕಂಗಾಲಾಗಿದ್ದಳು. ಚಂದ್ರಾ ಬಂದದ್ದು ಅವಳಿಗೆ ಸಹಾಯವಾಗಿತ್ತು. ಅಮ್ಮನಿಗೆ ಬಾಯಿಬಿಡಿಸುವ ಕಲೆಯಿತ್ತು. ಎಂಥ ಗುಟ್ಟಿನ ವಿಷಯವೇ ಆಗಲಿ ಅವಳು ಹೇಗಾದರೂ ಮಾತಾಡಿ ನಿಜದ ನಾಡಿ ಹಿಡಿಯದೇ ಬಿಡುತ್ತಿರಲಿಲ್ಲ. ಸದ್ಯ ಚಂದ್ರಾಳ ಗುಟ್ಟು ಮೊಟ್ಟೆಯೊಡೆದದ್ದು ಅಮ್ಮನ ಬಳಿ ಮಾತ್ರ. ಆದರೆ, ಅಮ್ಮ ಅದನ್ನು ತನ್ನೊಳಗಿಟ್ಟು ಮುಚ್ಚಲಾಗದೆ ವಾರಿಜಳಲ್ಲಿ ಹೇಳಿಕೊಂಡಿದ್ದಳು, ವಾರಿಜ ನನ್ನಲ್ಲಿ. ಚಂದ್ರಾ ಅದ್ಯಾವ ಗಳಿಗೆಯಲ್ಲಿ ಅವಳ ಮೈದುನನಿಗೆ ಮನಸೋತಳೋ. ಆದರೆ, ಗರ್ಭ ನಿಂತದ್ದು ಈಗ. ಅವನಿಗೆ ಮದುವೆಯಾಗಿದೆ, ತುಂಬು ಗರ್ಭಿಣಿ ಹೆಂಡತಿಯಿದ್ದಾಳೆ. ಅದಕ್ಕೇ ಚಂದ್ರಾ ಅವನ ಹೆಸರು ಹೇಳಲು ಒಲ್ಲಳು. ಒಂದು ಗಳಿಗೆಯಲ್ಲಿ ಹೀಗಾಗಿದೆ. ತಾನೀಗ ಸತ್ಯ ಹೇಳಿದರೆ ಅನ್ಯಾಯವಾಗಿ ಹುಡುಗಿಯ ಬಾಳೂ ಹಾಳಾಗುತ್ತದೆ, ಹೇಗೆ ತೆಗೆದುಕೊಂಡರೂ ತನಗೆ ಕಷ್ಟ ಇದ್ದದ್ದೆ. ಅವನಾದ್ರೂ ಚೆನ್ನಾಗಿರಲಿ, ಇದು ಚಂದ್ರಾಳ ವಾದ. ಅಮ್ಮ ಇದನ್ನ ಸುತಾರಾಂ ಒಪ್ಪುತ್ತಿರಲಿಲ್ಲ. ಅವಳ ಪ್ರಕಾರ ಚಂದ್ರಾ ಗಂಡ ಸತ್ತ ಮೇಲೆ ತವರು ಮನೆಗೇ ಬಂದಿರುತ್ತಿದ್ದರೆ ಚೆನ್ನಾಗಿತ್ತು. ಇನ್ನೊಂದು ಮದುವೆಗಾದರೂ ಯೊಚಿಸಬಹುದಿತ್ತು. ಇಲ್ಲಾ ಅಲ್ಲೇ ಉಳಿದವಳು ಬುದ್ಧಿ ಸ್ವಾಧೀನದಲ್ಲಿಟ್ಟುಕೊಳ್ಳಬೇಕಿತ್ತು. ಹೀಗಾದ ಮೇಲಾದರೂ ಅವನ ಕುರಿತು ಕಂಪ್ಲೇಂಟ್ ಕೊಡಬೇಕಿತ್ತು. ಎಲ್ಲವನ್ನೂ ತಾನೊಬ್ಬಳೇ ಯಾಕೆ ಅನುಭವಿಸಬೇಕು ಎಂಬ ಅನುಭವದ